## ಕರ್ನಾಟಕ ಅರಣ್ಯ ಇಲಾಖೆ

**ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ ಹಾಗೂ ಆನೆ ಕಾವಾಡಿಗ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ, ಕೆನರಾ ವೃತ್ತ, ಶಿರಸಿ**

**ಅಧಿಸೂಚನೆ**

***ಸಂಖ್ಯೆ: ಎ1/ಸಿಬ್ಬಂದಿ/ಆನೆ ಕಾವಾಡಿಗ/ ನೇರ ನೇಮಕಾತಿ/ಸಿಆರ್- 13/2022-23, ದಿನಾಂಕ: 29/05/2023***

1. ಈ ಕಛೇರಿ ಅಧಿಸೂಚನೆ ಸಂಖ್ಯೆ: ***ಎ1/ಸಿಬ್ಬಂದಿ/ಆನೆ ಕಾವಾಡಿಗ/ ನೇರ ನೇಮಕಾತಿ/ಸಿಆರ್-13/2022-23*** **ದಿನಾಂಕ: 15/03/2023ರ** ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ)/ತಿದ್ದುಪಡಿ) ನಿಯಮ 2008ರನ್ವಯ ಆನೆ ಕಾವಾಡಿಗ ಹುದ್ದೆಯ ನೇರ ನೇಮಕಾತಿಗಾಗಿ ಕೆಳಕಾಣಿಸಿದ ಮೀಸಲಾತಿ ವರ್ಗೀಕರಣದಡಿ ಅರ್ಜಿಗಳನ್ನು ಅಹ್ವಾನಿಸಲಾಗಿತ್ತು.
2. ಮೀಸಲಾತಿ ವರ್ಗೀಕರಣದ ಹುದ್ದೆಗಳು

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | ಒಟ್ಟು |
|---|---|---|---|---|---|---|---|
| | ಇತರೇ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | |
| ಪರಿಶಿಷ್ಟ ಜಾತಿ | 1 | - | - | - | - | - | 1 |
| ಸಾಮಾನ್ಯ ಅರ್ಹತೆ | 1 | - | - | - | - | - | 1 |
| **ಒಟ್ಟು** | **2** | - | - | - | - | - | **2** |

ತದನಂತರ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ: 05/05/2023 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶ ದಾಂಡೇಲಿ ಇವರ ನೇತೃತ್ವದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಗಿದ್ದು, ಅದರಂತೆ ದಿನಾಂಕ: 17/05/2023 ರಂದು ಅರ್ಹ ಅಭ್ಯರ್ಥಿಗಳಿಗೆ ದೈಹಿಕ-ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನ ನಡೆಸಲಾಗಿರುತ್ತದೆ.

ಮೇಲಿನಂತೆ ನಿಗಧಿತ ದಿನಾಂಕದಂದು ಸದರಿ ಸಂದರ್ಶನಕ್ಕೆ ಒಟ್ಟು 14 ಸಂಖ್ಯೆ ಅಭ್ಯರ್ಥಿಗಳು ಹಾಜರಾಗಿದ್ದು, ಅದರಲ್ಲಿ 01 ಸಂಖ್ಯೆ ಅಭ್ಯರ್ಥಿಯ ದಾಖಲಾತಿಗಳಲ್ಲಿ ಜನ್ಮ ದಿನಾಂಕದ ಕುರಿತು ಸರಿಯಾದ ಸ್ಪಷ್ಟತೆಯಿಲ್ಲದಿರುವ ಕಾರಣ ಸದ್ರಿಯವರನ್ನು ಸಂದರ್ಶನದಿಂದ ತಿರಸ್ಕರಿಸಲಾಗಿರುತ್ತದೆ. 13 ಸಂಖ್ಯೆ ಅಭ್ಯರ್ಥಿಗಳು ದೈಹಿಕ ಸಾಮರ್ಥ್ಯ ಹಾಗೂ ಆನೆ ನಿರ್ವಹಣೆ ಪರೀಕ್ಷೆಯಲ್ಲಿ ಭಾಗವಹಿಸಿದ್ದು, ಅವರಲ್ಲಿ ದೈಹಿಕ ಸಾಮರ್ಥ್ಯ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಗಳಿಗನುಗುಣವಾಗಿ ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯ ಪ್ರದೇಶದೊಳಗೆ ವಾಸವಾಗಿರುವ ಮತ್ತು ಆನೆ ನಿರ್ವಹಣೆ ಅನುಭವದ ಬಗ್ಗೆ ನೀಡಿರುವ ಪ್ರಮಾಣ ಪತ್ರ ಹಾಗೂ ಆಯ್ಕೆ ಸಮಿತಿಯು ನೀಡಿದ ಗರಿಷ್ಠ ಅಂಕಗಳ ಅನುಸಾರ ಮತ್ತು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರ ಅನುಸಾರ ಇತರೆ ಅಭ್ಯರ್ಥಿಗಳಿಗೆ ಇರುವ ಗರಿಷ್ಠ ವಯೋಮಿತಿ ಒಳಗಿದ್ದ (ಮೀಸಲಾತಿ, ವರ್ಗೀಕರಣ ಆಧಾರದ ಮೇಲೆ) ಈ ಕೆಳಕಾಣಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆ ಸಮಿತಿಯ ವರದಿಯ ಆಧಾರದ ಮೇರೆಗೆ ಅಂತಿಮವಾಗಿ 01 ಅರ್ಹ ಅಭ್ಯರ್ಥಿಯೆಂದು ಪರಿಗಣಿಸಿ ಈ ಕೆಳಕಂಡಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯ ಅಭ್ಯರ್ಥಿಗಳೆಂದು ಪರಿಗಣಿಸಿದೆ.

| ಕ್ರ ಸಂ | ಅರ್ಜಿ ಕ್ರ. ಸಂ | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ಪೂರ್ಣ ವಿಳಾಸ | ಜನ್ಮ ದಿನಾಂಕ | ಆನೆ ಸಾಕಣೆಯಲ್ಲಿ ಹೊಂದಿದ ಅನುಭನ (ಅನುಭವ) | ಕರ್ನಾಟಕ ರಾಜ್ಯ ವ್ಯಾಪ್ತಿಯ ಅಧಿಸೂಚಿತ ಅರಣ್ಯದೊಳಗೆ ವಾಸಿಸುವರಾಗಿ ರತಕ್ಕದ್ದು | ವರ್ಗೀಕರಣ (ಲಿ) | ನೇಮಕಾತಿ ಪ್ರಕ್ರಿಯೆಯಲ್ಲಿ ಗಳಿಸಿದ ಒಟ್ಟು ಅಂಕಗಳು |
|---|---|---|---|---|---|---|---|---|
| 01 | 17 | ಮಹಮ್ಮದ ಇಬ್ರಾಹಿಂ ಎಂ. | ಸಕ್ರೆಬೈಲು ಗ್ರಾಮ, ಗಾಜನೂರು ಅಂಚೆ, ತಾ: ಜಿ: ಶಿವಮೊಗ್ಗ-577 202 | 07/07/2000 | 05 ವರ್ಷ | ಹೌದು | ಸಾಮಾನ್ಯ | 90 |

ಮುಂದುವರೆದು, ಸಮಿತಿಯ ವರದಿಯನುಸಾರ 2022-23ನೇ ಸಾಲಿನ ಆನೆ ಕಾವಾಡಿಗ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಹುದ್ದೆಗೆ ಅರ್ಹ ಅಭ್ಯರ್ಥಿಗಳು ದೊರೆಯದೇ ಇರುವುದರಿಂದ ಆನೆ ಕಾವಾಡಿಗ ನೇರ ನೇಮಕಾತಿಯಲ್ಲಿನ ಷರತ್ತಿನನ್ವಯ ಈ ಹುದ್ದೆಯನ್ನು ಬ್ಯಾಕ್ ಲಾಗ ಹುದ್ದೆಯೆಂದು ಪರಿಗಣಿಸಲಾಗಿರುತ್ತದೆ.

ಈ ಮೇಲಿನ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದಾಗಿ ಯಾವುದೇ ಅಭ್ಯರ್ಥಿಗಳು ಬಾಧಿತರಾಗಿದ್ದಲ್ಲಿ ಆಕ್ಷೇಪಣೆಯನ್ನು ಸಲ್ಲಿಸುವುದಿದ್ದಲ್ಲಿ ದಿನಾಂಕ: 31/05/2023ರ ಸಂಜೆ 5:30ರೊಳಗೆ ಅರಣ್ಯ ಸಂರಕ್ಷಣಾಧಿಕಾರಿಗಳು ಕೆನರಾ ವೃತ್ತ ಶಿರಸಿ-581402 ವಿಳಾಸದ ಆಯ್ಕೆ ಪ್ರಾಧಿಕಾರಿಗಳಿಗೆ ತಲುಪುವಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು.

29.05.23

(ಕೆ. ವಿ ವಸಂತ ರೆಡ್ಡಿ, ಭಾ. ಅ. ಸೇ)
ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಆನೆ ಕಾವಾಡಿಗ ನೇರ ನೇಮಕಾತಿ
ಆಯ್ಕೆ ಪ್ರಾಧಿಕಾರ, ಕೆನರಾ ವೃತ್ತ ಶಿರಸಿ

ಪ್ರತಿಗಳು:

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಿಬ್ಬಂದಿ ಮತ್ತು ನೇಮಕಾತಿ) ಅರಣ್ಯ ಭವನ ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮಾಹಿತಿ ಮತ್ತು ಸಂಪರ್ಕ) ಅರಣ್ಯ ಭವನ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಈ ಮಾಹಿತಿಯನ್ನು ಅರಣ್ಯ ಇಲಾಖೆಯ website: www.kfdrecruitment.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲು ಗೌರವಪೂರ್ವಕವಾಗಿ ಕೋರಲಾಗಿದೆ.
3. ಉಪ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತುಸಾರ್ವಜನಿಕ ಸಂಪರ್ಕ ಇಲಾಖೆ ಕಾರವಾರ ಇವರಿಗೆ ಕಳುಹಿಸುತ್ತಾ, ಸದರಿ ಮಾಹಿತಿಯನ್ನು ರಾಜ್ಯದಲ್ಲಿ ಅತ್ಯಾಧಿಕ ಪ್ರಸಾರವುಳ್ಳ ಎರಡು ದಿನ ಪತ್ರಿಕೆಗಳಲ್ಲಿ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಿ, ಪ್ರಕಟಿಸಿದ ಐದು ಪತ್ರಿಕೆಗಳನ್ನು ಈ ಕಚೇರಿಗೆ ಕಳುಹಿಸಲು ಕೋರಿದೆ.
4. ವೃತ್ತದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ, ಈ ಮಾಹಿತಿಯನ್ನು ನಿಮ್ಮ ಕಚೇರಿಯ "ಸೂಚನಾ ಫಲಕ" ದ ಮೇಲೆ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲು ಕೋರಿದೆ.
5. ಈ ಕಚೇರಿಯ "ಸೂಚನಾ ಫಲಕ" ಕ್ಕೆ